| Form No.4 (Civil) Deposition Sheets (R.P.No.57) |
| --- |

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 3/2017

ಪ್ರಾ.ಸಾ. 5 ಚಾ.ಸಾ 6

| | | |
| --- | --- | --- |
| ಹೆಸರು | : | ವೆಂಕಟಪ್ಪ |
| ತಂದೆಯ ಹೆಸರು | : | ಅನಂತಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಚಪೇಟ್ಲಾ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 07-03-2026**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ನನಗೆ ಚಾಸಾ-1, 4 ಮತ್ತು 5 ರವರ ಪರಿಚಯ ಇರುತ್ತದೆ. ಚಾಸಾ-7 ರಿಂದ 10 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ಹಾಗೂ 1 ಮತ್ತು 4 ನೇ ಆರೋಪಿತರ ನಡುವೆ ಮನೆಯ ಕುರಿತು ಜಗಳ ಆಗಿದ್ದು ಗೊತ್ತಿರುತ್ತದೆ. ಆ ಮನೆಗೆ ಒಂದೆ ಬಾಗಿಲು ಇದ್ದು ಹೋಗಿ ಬರುವುದಕ್ಕೆ ತೊಂದರೆ ಆಗುತ್ತಿದ್ದರಿಂದ ಜಗಳ ಆಗಿರುತ್ತದೆ.

2. ದಿಃ 05.06.2016 ರಂದು ಸಾಯಂಕಾಲ 7.00 ಗಂಟೆ ಸುಮಾರಿಗೆ ಚಂದ್ರಪ್ಪ ಮಾಸ್ತರ ಮತ್ತು ಚಾಸಾ-4 ರವರು ಜಗಳ ಆಡುತ್ತಿದ್ದರು. ನಂತರ ಚಾಸಾ-1, 4 ಮತ್ತು 5 ರವರು ದ್ವಿಚಕ್ರ ವಾಹನದ ಮೇಲೆ ಪೊಲೀಸ ಠಾಣೆಗೆ ಕೇಸು ಮಾಡುತ್ತೇವೆ ಎಂದು ಹೋಗಿರುತ್ತಾರೆ. ನಂತರ ಆರೋಪಿತರು ಜೀಪ ತೆಗೆದುಕೊಂಡು ಅವರು ಸಹ ಪೊಲೀಸ ಠಾಣೆಗೆ ಹೋಗಿರುತ್ತಾರೆ. ನಾಗಲಿಂಗಪ್ಪ ಗುಡಿಯ ಹತ್ತಿರ ರಾತ್ರಿ 10.30-11.00 ಗಂಟೆ ಸುಮಾರು ನಾನು, ಚಾಸಾ-7 ರಿಂದ 10 ರವರು ಇದ್ದೇವು. ನಾವು ಭಜನೆ ಮಾಡಿ ರಸ್ತೆಗೆ ಬಂದಿರುತ್ತೇವೆ. ಚಾಸಾ-1, 4 ಮತ್ತು 5 ರವರು ದ್ವಿಚಕ್ರ ವಾಹನದಲ್ಲಿ ಗುರುಮಠಕಲ ಕಡೆಯಿಂದ ಬಂದಿರುತ್ತಾರೆ. ಹಿಂದಿನಿಂದ ಜೀಪ ತೆಗೆದುಕೊಂಡು ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಮಾಡಿರುತ್ತಾರೆ. ಆ ಸದರಿ ಜೀಪಿನಲ್ಲಿ ಆರೋಪಿ

ಚಂದ್ರಪ್ಪ ಮಾಸ್ತರ ಇದ್ದರು. 1 ನೇ ಆರೊಪಿತನು ಜೀಪಿನ ಫುಟರೇಸ್ಟ ಮೇಲೆ ನಿಂತುಕೊಂಡಿದ್ದ ಡಿಕ್ಕಿ ಮಾಡಿದ್ದರಿಂದ ಆತನು ಸಹ ಕೆಳಗೆ ಬಿದ್ದಿರುತ್ತಾನೆ. ಆ ಜೀಪನ್ನು 2 ನೇ ಆರೋಪಿತನು ಚಲಾಯಿಸುತ್ತಿದ್ದನು. ಚಾಸಾ-1 ಮತ್ತು 4 ರವರಿಗೆ ಜೀಪು ಡಿಕ್ಕಿ ಮಾಡಿದ್ದರಿಂದ ಗಂಭೀರ ಸ್ವರೂಪದ ಗಾಯ ಆಗಿರುತ್ತವೆ. ರಸ್ತೆಯ ಬಳಿ ಬಿದ್ದಿದು ಅವರನ್ನು ಮೇಲೆಕ್ಕೆ ಎತ್ತಿ ರಸ್ತೆಯ ಪಕ್ಕಕ್ಕೆ ತಂದಿರುತ್ತೇವೆ. ಅವರನ್ನು ಆಂಬುಲೆನ್ಸನಲ್ಲಿ ನಾವೆ ಕರೆದುಕೊಂಡು ಹೋಗಿರುತ್ತೇವೆ. ಹಿಂದಿನ ಜಗಳ ಆಗಿದ್ದರಿಂದ ಜೀಪು ತೆಗೆದುಕೊಂಡು ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಮಾಡಿರುತ್ತಾರೆ ಎಂದು ಗೊತ್ತಾಯಿತು.

3. ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ ನಾನು ಸ್ಥಳವನ್ನು ತೋರಿಸಿರುತ್ತೇನೆ. ಸ್ಥಳದಲ್ಲಿ ದ್ವಿಚಕ್ರ ವಾಹನ ಹಾಗೂ ಎರಡು ಬಡಿಗೆಗಳನ್ನು ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿದಾರರಿಗೆ ಈಗ ದ್ವಿಚಕ್ರವಾಹನದ ಭಾವಚಿತ್ರಗಳನ್ನು ತೋರಿಸಾಲಗಿದ್ದು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಜೀಪಿನ ಭಾವಚಿತ್ರಗಳನ್ನು ತೋರಿಸಾಗಿದ್ದು ಅವುಗಳನ್ನು ನಿ.ಪಿ.6 ರಿಂದ 9 ಎಂದು ಗುರುತಿಸಲಾಗಿದೆ. ಸಾಕ್ಷಿದಾರರಿಗೆ ಬಡಿಗೆಗಳನ್ನು ತೋರಿಸಲಾಗಿದ್ದು ನೋಡಿ ಗುರುತಿಸದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ</u>

4. ಮಹಾದೇವಪ್ಪನಿಗೆ ಒಟ್ಟು ಐದು ಜನ ಅಣ್ಣತಮ್ಮಂದಿರು ಆಗಿರುತ್ತಾರೆ. ಆ ಐದು ಜನ ಅಣ್ಣತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ ಸುಮಾರು 20 ವರ್ಷಗಳಿಂದ ಭಾಗ ಮಾಡಿಕೊಂಡಿರಬಹುದು. ಆ ಮನೆಯಲ್ಲಿ ಭಾಗ ಮಾಡಿಕೊಂಡಿರುತ್ತಾರೆ. ಆ ಮನೆಯ ಒಟ್ಟು ಎಷ್ಟು ಭಾಗಗಳು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಆ ಮನೆಯಲ್ಲಿ ಈಗ ಚಾಸಾ-4 ಮತ್ತು 1, 4 ನೇ ಆರೋಪಿತರು ಇರುತ್ತಾರೆ. ಮಾಣಿಕ್ಯಪ್ಪ, ಸಾಬಣ್ಣ ಇವರು ಈಗ ಈ ಮನೆಯಲ್ಲಿ ಇರುವುದಿಲ್ಲ. ಮಾಣಿಕ್ಯಪ್ಪ ಮತ್ತು ಸಾಬಣ್ಣ ಇವರು ಆ ಮನೆಯಲ್ಲಿ ಯಾಕೆ ಇರುವುದಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆ ಹಳೆ ಮನೆ ಆಗಿರುತ್ತದೆ. ಈ ಎಲ್ಲ ಅಣ್ಣತಮ್ಮಂದಿರಲ್ಲಿ ಚಂದ್ರಪ್ಪ ಮಾಸ್ತರ ಒಬ್ಬನೇ ಓದಿರುತ್ತಾನೆ ಮತ್ತು ಮಾಸ್ತರ ಕೆಲಸ ಮಾಡಿಕೊಂಡು ಇದ್ದರು.

ಚಂದ್ರಪ್ಪ ಮಾಸ್ತರ ಹಳೇ ಮನೆ ರಿಪೇರಿ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರಪ್ಪ ಮಾಸ್ತರ ಹೊಲ ಮನೆಗಳನ್ನು ಸುಮಾರು 20-25 ವರ್ಷಗಳಿಂದ ಮಹಾದೇವಪ್ಪ (ಚಾಸಾ-4) ರವರು ಮಾಡುತ್ತಿದ್ದ ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರಪ್ಪ ಮಾಸ್ತರ ಚಾಸಾ-4 ರವರು ತನ್ನ ಸಹೋದರನಾಗಿದ್ದು ಜಮೀನನಲ್ಲಿ ಏನು ಆದಾಯ ಕೊಡುತ್ತಿಲ್ಲದಿದ್ದರು ಸಹ ತನ್ನ ಸಹೋದರ ಇರುತ್ತಾನೆ ತಾಳಿಕೊಂಡು ಸುಮ್ಮನಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ-4 ರವರ ಚಂದ್ರಪ್ಪ ಮಾಸ್ತರ ಹೊಲಗಳನ್ನು ಪಾಲು ಮಾಡಬಾರದೆಂದು ಹೇಳಿದ್ದರಿಂದ ಅವರ ನಡುವೆ ಜಗಳ ಪ್ರಾರಂಭವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರಪ್ಪ ಮಾಸ್ತರನಿಗೆ ಸುಲೋಚನ ಎಂಬುವರನ್ನು ಮದುವೆ ಆಗಿತ್ತು ಎಂದರೆ ನನಗೆ ಗೂತ್ತಿರುವುದಿಲ್ಲ. ಸುಲೋಚನರವರಿಗೆ ಸುಮಾರು ವರ್ಷಗಳಿಂದ ಆರೋಗ್ಯ ಸರಿ ಇಲ್ಲದೆ ಕೈ ಕಾಲುಗಳು ಬಿದ್ದು ಹೋಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸುಲೋಚನರವರಿಗೆ ಆರೋಗ್ಯ ಸರಿ ಇಲ್ಲದಿದ್ದರಿಂದ ದೇವಮ್ಮ ಇವರನ್ನು ಚಂದ್ರಪ್ಪ ಮಾಸ್ತರ ಮದುವೆ ಆಗಿದ್ದ ಎಂದರೆ ಆದರೆ ಆಕೆಯ ಹೆಸರು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದೇವಮ್ಮ ಇವರಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರಪ್ಪ ಮಾಸ್ತರನ ಪಾಲಿಗೆ ಬಂದಂತಹ ಮನೆಯಲ್ಲಿ ದೇವಮ್ಮರವರು ಇರುತ್ತಾರೆ ಎಂದರೆ ಸರಿ.

5. ದಿಃ 05.06.2016 ರಂದು ಮನೆಯಲ್ಲಿ ಜಗಳ ಆದಾಗ ನಾನು ಅವರ ಮನೆಯ ಮುಂದೆ ಇದ್ದೇನು. ಆ ದಿನ ಜಗಳವನ್ನು ನಾನು ನೋಡಿರುತ್ತೇನೆ. ಚಂದ್ರಪ್ಪ ಮಾಸ್ತರ ಮತ್ತು ಮಹಾದೇವಪ್ಪ ರವರು ಜಗಳ ಮಾಡುತ್ತಿದ್ದರು. ಜಗಳ ಆದಾಗ ಸುಮಾರು 30-40 ಜನರು ಸೇರಿದ್ದರು. ಆ ವ್ಯಕ್ತಿಗಳ ಹೆಸರು ನನಗೆ ಹೇಳಲು ಬರುವುದಿಲ್ಲ. ಆ ಜಗಳದಲ್ಲಿ ಚಾಸಾ-1 ಸಾಬಪ್ಪ ರವರು ಒಣಕ್ಕೆ ತೆಗೆದುಕೊಂಡು ಚಂದ್ರಪ್ಪ ಮಾಸ್ತರನಿಗೆ ಹೊಡೆದಿರುತ್ತಾನೆ ಎಂದರೆ ಸಾಕ್ಷಿದಾರರು ಹೊಡೆದಾಟ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ಜಗಳದಲ್ಲಿ ಚಾಸಾ-1, 4 ಮತ್ತು 5 ರವರು ಬಡಿಗೆ ತೆಗೆದುಕೊಂಡು ಚಂದ್ರಪ್ಪ ಮಾಸ್ತರಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿದಾರರು ಅಲ್ಲಿ ಹೊಡೆದಾಟ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಜಗಳದಲ್ಲಿ ಚಾಸಾ-1 ಒಣಕೆಯಿಂದ ಚಂದ್ರಪ್ಪ ಮಾಸ್ತರಿನಿಗೆ ಹೊಡೆದಿದ್ದ ಹಾಗೂ ಚಾಸಾ-4 ಮತ್ತು

5 ರವರು ಬಡಿಗೆಯಿಂದ ಚಂದ್ರಪ್ಪ ಮಾಸ್ತರನಿಗೆ ಹೊಡೆದ್ದಿರಿಂದ ಚಂದ್ರಪ್ಪ ಮಾಸ್ತರ ಪ್ರಜ್ಞೆ ತಪ್ಪಿ ಬಿದ್ದಿದ ಎಂದರೆ ನನಗೆ ಿಗೊತ್ತಿರುವುದಿಲ್ಲ. ಅವರ ಹೊಡೆದ್ದಿರಿಂದ ಚಂದ್ರಪ್ಪ ಮಾಸ್ತರನ ಸ್ಥಿತಿ ಚಿಂತಜನಕವಾಗಿದ್ದು ಆತನ ಬಟ್ಟೆಗಳಾದ ಅಂಗಿ ಮತ್ತು ಪ್ಯಾಂಟಿಗೆ ರಕ್ತ ಹತ್ತಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿತರೆಲ್ಲರೂ ಚಂದ್ರಪ್ಪ ಮಾಸ್ತರನನ್ನು ಆಂಬುಲೆನ್ಸನಲ್ಲಿ ಗುರುಮಠಕಲ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರನ್ನು ಗುರುಮಠಕಲ ಸರಕಾರಿ ಆಸ್ಪತ್ರೆಯಲ್ಲಿ ಆಡ್ಮಿಟ್ ಮಾಡಿರುತ್ತಾರೆ ಎಂದು ನನಗೆ ಗೂತ್ತಿರುವುದಿಲ್ಲ. ಆಸ್ಪತ್ರೆಗೆ ಪೊಲೀಸರು ಬಂದು ಮತ್ತು ವೈದ್ಯಾಧಿಕಾರಿಗಳು ಪರೀಕ್ಷಿಸಿದ ನಂತರ ಚಂದ್ರಪ್ಪ ಮಾಸ್ತರನ ಸ್ಥಿತಿಚಿಂತಜನಾಕವಾಗಿದ್ದು ಅವರು ಬದುಕುಳಿಯುವ ಸಾಧ್ಯತೆ ಕಡಿಮೆ ಇರುತ್ತದೆ ಎಂದು ಹೇಳಿದ್ದರಿಂದ ಚಂದ್ರಪ್ಪ ಮಾಸ್ತರವರನ್ನು ಕಲಬುರಗಿಯ ಯುನಿಟೆಡ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರಪ್ಪ ಮಾಸ್ತರ ಸಾಯುತ್ತಾನೆ ಎಂದು ತಿಳಿದು ಆ ಕೇಸು ತಮ್ಮ ಮೇಲೆ ಬರುತ್ತದೆ ಎಂದು ಚಾಸಾ-1, 4 ಮತ್ತು 5 ಮತ್ತು ನಾನು ಸೇರಿ ಸುಳ್ಳು ದೂರು ಕೊಡಲು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ಹೋಮಗಾರ್ಡ ಆಗಿ ಕೆಲಸ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು ಚಾಸಾ-1 ಒಟ್ಟಿಗೆ ಕೋರ್ಟಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಬಸ್ಸಿಗೆ ಬಂದಿರುತ್ತೇನೆ. ಚಾಸಾ-1 ರವರು ನನಗೆ ಬೆದರಿಸಿ ಹಣ ಕೊಟ್ಟು ಇದೇ ರೀತಿಯಾಗಿ ಸಾಕ್ಷಿ ಹೇಳಬೇಕೆಂದು ಹೇಳಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಯಾರು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಏನೆಂದು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

6. ಕಲಬುರಗಿಯ ಯುನಿಟೆಡ ಆಸ್ಪತ್ರೆಯ ಚಂದ್ರಪ್ಪ ಮಾಸ್ತರ ಹೇಳಿಕೆ ಕೋಡುವ ಸ್ಥಿತಿಯಲ್ಲಿ ಇಲ್ಲದ ಕಾರಣ ಚಂದ್ರಪ್ಪ ಮಾಸ್ತರನ ಹೆಂಡತಿ ದೇವಮ್ಮ ಇವರು ಪೊಲೀಸರಿಗೆ ದೂರು ಕೊಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ-1, 4 ಮತುತ 5 ಇವರು ಚಂದ್ರಪ್ಪ ಮಾಸ್ತರ ಈಗೆ

ಹೊಡೆದಿರುತ್ತಾರೆ ಎಂದು ದೇವಮ್ಮ ಇವರು ದೂರು ಕೊಟ್ಟಿದ್ದರು ಸಹ ಆ ದೂರನ್ನು ಹರಿದು ಹಾಕಿ ಅಪಘಾತ ಮಾಡಿದ ಕೇಸು ಎಂದು ಈ ಕೇಸನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಯುನಿಟೆಡ್ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದುಕೊಂಡ ಮೇಲೆ ಮರುದಿನ ಮೃತಪಟ್ಟಿರುತ್ತಾನೆ ಎಂದರೆ ಸಾಕ್ಷಿದಾರರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಆ ಪ್ರಕಾರ ಜೀಪಿನಿಂದ ಡಿಕ್ಕಿ ಮಾಡಿರುತ್ತಾರೆ ಎಂದು ಸುಳ್ಳುಕೇಸು ಮಾಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರಪ್ಪ ಮಾಸ್ತರ ಕೊಲೆ ಕೇಸಿನಲ್ಲಿ ನಾನು ಸಹಕಾರಣ ಆಗಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಪ್ಪ ಮಾಸ್ತರನಿಗೆ ಎಲ್ಲ ಆರೋಪಿತರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದು ಆಗಾಗಿ ಅವರ ಮೇಲೆ ಚಾಸಾ-1 ಇವರು ಸುಳ್ಳು ಕೇಸು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕೇಸು ಆದ  ಮೇಲೆ ಸಾಕ್ಷಿದಾರರಿಗೆ ಎದುರಿಸುತ್ತಾನೆ ಎಂದು ಚಾಸಾ-1 ಇನ್ನೊಂದು ಕೇಸು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂಜಪ್ಪನ ಮೇಲೆ ಅಪಘಾತ ಮಾಡಿರುತ್ತಾನೆ ಎಂದು ಆತನ ಮೇಲೆ ಚಾಸಾ-1 ರವರು ಇನ್ನೊಂದು ಕೇಸು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೋಟಾರ ಸೈಕಲ್‌ನ ಡೋಮ ಹೊಡೆದು ಹೋಗಿತ್ತು. ಆ ಮೋಟಾರ ಸೈಕಲನ ಹಿಂಬಾಗ ಡಿಕ್ಕಿ ಮಾಡಿದರೆ ಮೋಟಾರ ಸೈಕಲ ಹಿಂಭಾಗ ಜಕ್ಕಂ ಆಗುತ್ತದೆ ಎಂದರೆ ಸರಿ. ಸಾಕ್ಷಿದಾರರಿಗೆ ಈಗ ನಿ,ಪಿ.2 ಮತ್ತು 3 ನ್ನು ತೋರಿಸಲಾಗಿದ್ದು ಮೋಟಾರ ಸೈಕಲ್‌ನ ಹಿಂಭಾಗ ಜಕ್ಕಮ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಮೋಟಾರ ಸೈಕಲನ ಹಿಂಭಾಗ ಮತ್ತು ಮುಂಭಾಗ ಜಕ್ಕಮ ಆಗಿರಲಿಲ್ಲ ಈ ಕೇಸಿಗೊಸ್ಕರ ಮೋಟಾರ ಸೈಕಲಗೆ ನಾವೆ ಹೊಡೆದು ಹಾಕಿ ಜಕ್ಕಮ ಆಗಿದ್ದರು ಸಹ ಜಿಪು ಡಿಕ್ಕಿ ಮಾಡಿದ್ದರಿಂದ ಆ ಮೋಟಾ ರ ಸೈಕಲ್ ಜಕ್ಕಮ ಆಗಿರುತತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಜೀಪು ಡಿಕ್ಕಿ ಮಾಡಿರುತ್ತಾರೆ ಎಂದು ದೇವಮ್ಮ ಇವರಿಗೆ ಹೇಗಾದರೂ ಮಾಡಿ ಸತ್ತಾಯಿಸಬೇಕೆಂಬ ನಾನು ಮತ್ತು ಚಾಸಾ-1, 4 ಮತ್ತು 5 ರವರು ಸೇರಿಕೊಂಡು ದೇವಮ್ಮಳ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಈ ಕೇಸನ್ನು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ದೇವಮ್ಮ ಇವರ ಮೊಮ್ಮಗಳು

ಅಕ್ಷರಾ ಯಾರು ಎಂದರೆ ಗೊತ್ತಿಲ್ಲ. ಈ ಅಕ್ಷರಾ ಸುಲೋಚನ ಇವರ ಮಗಳ ಮಗಳು ಆಗಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಕ್ಷರಾ ಇವರು ಯಾರ ಹತ್ತಿರ ಇರುತ್ತಾರೆ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಬೋರಬಂಡಾ ಸಾಬಣ್ಣ ಎನ್ನುವವರ ಹತ್ತಿರ ಈ ಅಕ್ಷರಾ ಇರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ದೇವಮ್ಮ ಇವರು ಅಕ್ಷರಾ ಮತ್ತು ಸಾಬಣ್ಣ ಎನ್ನುವವರ ಮೇಲೆ O.S No.17/2017 ಆಸ್ತಿಯಲ್ಲಿ ಭಾಗಬೇಕೆಂದು ಹಾಕಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ.

8. O.S No.17/2017 ನ್ನು ದೇವಮ್ಮ ಮತ್ತು ಅವರ ಮಕ್ಕಳು ಹಾಗೂ ಅಕ್ಷರಾ, ಸಾಬಣ್ಣ ಇವರು ರಾಜಿ ಮೂಲಕ ಬಗೆಹರಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರ ತಂದೆ ಮಹಾದೇವಪ್ಪ ಇವರು ಸಹ ದೇವಮ್ಮಳ ಮೇಲೆ ಸಿವಿಲ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ-1 ಸಾಬಪ್ಪ ಈತನು ಎಲ್ಲ ಆಸ್ತಿ ನನಗೆ ಬೇಕು ತಾನು ಚಂದ್ರುಪ್ಪ ಮಾಸ್ತರನ ದತ್ತ ಪುತ್ರನೆಂದು ದೇವಮ್ಮ ಹಾಗೂ 27 ಜನರ ಮೇಲೆ O.S No.101/2025 ಎಂದು ಹಾಕಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ಚಂದ್ರುಪ್ಪ ಮಾಸ್ತರನ ಎಲ್ಲ ಆಸ್ತಿಯನ್ನು ಹೊಡೆಯಬೆಕೆಂಬ ಉದ್ದೇಶದಿಂದ ದೇವಮ್ಮಳ ಮೇಲೆ ಈ ಎಲ್ಲ ಕೇಸುಗಳನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೂ ಸಹ ಈ ಕೇಸಿನ ಮೇಲೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಚಾಸಾ-1 ರವರ ಪ್ರಭಾವದ ಮೇಲೆ ಈ ರೀತಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರುಪ್ಪ ಮಾಸ್ತರ ಯಾವಾಗ ಸತ್ತ ಎನ್ನುವುದಕ್ಕೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿರುವುದಿಲ್ಲ ಚಾಸಾ-1 ರವರ ಹೇಳಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.